Reg. No. : ......................................

Name : ..........................................

**SY 724**

# SECOND YEAR HIGHER SECONDARY EQUIVALENCY EXAMINATION, MAY 2024
## Part – II
## KANNADA
**Maximum : 80 Scores**

Time : 2½ Hours
Cool-off Time : 15 Minutes

---

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ 15 ನಿಮಿಷ ಕೂಲ್ ಆಫ್ ಸಮಯವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**Score**

**1 ರಿಂದ 4 ರವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.** **(4×1=4)**

**1.** ಅನುಪಮಾ ನಿರಂಜನರು ಬರೆದ ಮೊದಲ ಕವಿತೆ ಯಾವುದು ?
(ಆಳ, ಋಣ, ಪರೀಕ್ಷೆ, ಕೃಷ್ಣನ ಕಂಡೀರ)

**2.** 'ಹರಿಶ್ಚಂದ್ರ ಕಾವ್ಯ'ವನ್ನು ಬರೆದ ಕವಿ ಯಾರು ?
(ರಾಘವಾಂಕ, ಜನ್ನ, ಸೋಮಕವಿ, ಪುರಂದರದಾಸರು)

**3.** ಎಸ್. ವಿ. ಪರಮೇಶ್ವರ ಭಟ್ಟರ ವಚನಗಳಲ್ಲಿ ಕಂಡುಬರುವ ಅಂಕಿತವೇನು ?
(ಸದಾಶಿವ ಗುರು, ಹರಹರ ಶ್ರೀ ಚೆನ್ನ ಸೋಮೇಶ್ವರ, ಕೂಡಲಸಂಗಮದೇವ, ರಾಮನಾಥ)

**4.** ಕೆಳಗಿನವುಗಳಲ್ಲಿ ಶಿವರಾಮ ಕಾರಂತರು ಬರೆದ ಗೀತಾ ನಾಟಕ ಯಾವುದು ?
(ಮಾವ ಕೊಡಿಸಿದ ಕೋಟು, ಬದುಕು, ನೆರೆ, ಕಿಸಾ ಗೋತಮಿ)

**Score**

**5 ರಿಂದ 9 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.** **(4×1=4)**

**5.** ಆತುರಾತುರ – ಈ ಪದವನ್ನು ಬಿಂಗಡಿಸಿ ಬರೆಯಿರಿ.

**6.** ತ್ಯಾಗ – ಈ ಪದದ ತದ್ಭವ ರೂಪವನ್ನು ಹೆಸರಿಸಿರಿ.

**7.** ಸೋಲು – ಇದರ ವಿರೋಧಾರ್ಥ ಪದವನ್ನು ಬರೆಯಿರಿ.

**8.** ಒಲುಮೆ – ಈ ಪದದ ಅರ್ಥವೇನು ?

**9.** ಭಾಷೆ ಎಂಬ ಬೆಳಕು ಇಲ್ಲದೆ ಇರುತ್ತಿದ್ದರೆ ಜಗತ್ತು ಅಜ್ಞಾನದ ಅಂಧಕಾರದಲ್ಲಿ ಮುಳುಗಿ ಹೋಗಿರುತ್ತಿತ್ತು ಎಂದು ಹೇಳಿದವರು ಯಾರು ?

**10 ರಿಂದ 15 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.** **(5×2=10)**

**10.** ಧರೆ – ಇದರ ಎರಡು ಪರ್ಯಾಯ ಪದಗಳನ್ನು ಬರೆಯಿರಿ.

**11.** ಜಲ ಸಂರಕ್ಷಣೆಯ ಮಹತ್ವವನ್ನು ಸಾರುವ ಘೋಷಣಾ ವಾಕ್ಯವನ್ನು ತಯಾರಿಸಿರಿ.

**12.** ಕೆಳಗೆ ಕೊಟ್ಟಿರುವ ವಾಕ್ಯವನ್ನು ಶಿಷ್ಟ ಕನ್ನಡಕ್ಕೆ ಪರಿವರ್ತಿಸಿ ಬರೆಯಿರಿ.
ಕಂದಯ್ನ ಗೆಜ್ಜೆ ಸಪ್ಪುಳ ಕೇಳಿ ನಿಬ್ಬಣದೆತ್ತು ಬೆದರ್ಯಾವು

**13.** ಚೆನ್ನ ಪರಯನನ್ನು ಆಶ್ರಯಿಸಿಕೊಂಡಿದ್ದ ಜೀವಗಳು ಯಾವುವು ?

**14.** ಅಡಿಗೆರೆ ಎಳೆದ ಪದವನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ರಚಿಸಿರಿ.
ಆಗುಂಬೆಯ ಸೂರ್ಯಾಸ್ತಮಾನದ ಸುಂದರ ದೃಶ್ಯ ಎಲ್ಲರನ್ನೂ <u>ರೋಮಾಂಚನಗೊಳ್ಳುವಂತೆ</u> ಮಾಡಿತು.

**15.** ಪಾಲ್ – ಹಾಲು ಈ ರೀತಿ ಭಾಷೆಯಲ್ಲಿ ಆಗಿರುವ ಧ್ವನಿ ವ್ಯತ್ಯಾಸಕ್ಕೆ ಯಾವುದಾದರೂ ಎರಡು ಉದಾಹರಣೆಗಳನ್ನು ಕೊಡಿರಿ.

**16 ರಿಂದ 20 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.** **(4×3=12)**

**16.** ಪಲವುಂ ಪಳ್ಳ ಸಮುದ್ರವೈ – ಈ ಮಾತಿನ ಸ್ವಾರಸ್ಯವನ್ನು ಬರೆಯಿರಿ.

**17.** ಬದುಕಿನಲ್ಲಿ ವೈರಾಗ್ಯ ಮೂಡುವುದು ಯಾವಾಗ ? 'ಬದುಕು' ಕವಿತೆಯ ಆಧಾರದಲ್ಲಿ ಬರೆಯಿರಿ.

**18.** ಕೆಳಗೆ ಕೊಡಲಾದ ತ್ರಿಪದಿಯ ಆಶಯವನ್ನು ಬರೆಯಿರಿ.
ಜೂಜಾಡಿ ಪಾಂಡವರು ರಾಜ್ಯವ ಸೋತರು
ಜೂಜಾಡಿ ನಳನು ಬಳಲಿದ । ಕಂದಯ್ಯ
ಜೂಜಿಗೆ ಮನವ ಬಿಡದಿರು

Score

**19.** ಕೆಳಗೆ ಕೊಟ್ಟಿರುವ ಅನುಪಮಾ ನಿರಂಜನರ ಜೀವನ ಚರಿತ್ರೆಯನ್ನು ಆತ್ಮಕತೆಯಾಗಿ ಬದಲಾಯಿಸಿರಿ.

ಅನುಪಮಾ ನಿರಂಜನರ ಬರವಣಿಗೆ 1975ರ ಹೊತ್ತಿಗೆ ಹೊಸ ತಿರುವು ಪಡೆಯಿತು. ಅವರು ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಲು ಶುರು ಮಾಡಿದರು. ಬರವಣಿಗೆಯ ಗುಣಮಟ್ಟ ವೃದ್ಧಿಸಿಕೊಳ್ಳಲು ಅವರಿಗೆ ಹೊರಗಿನವರು ಯಾರೂ ಸಹಾಯ ಮಾಡಲು ಸಾಧ್ಯವಿಲ್ಲ. ಸ್ವಂತ ಪರಿಶ್ರಮದಿಂದ ಅದನ್ನು ಸಾಧಿಸಬೇಕೆಂಬುದನ್ನು ಅವರು ಕಂಡುಕೊಂಡರು.

**20.** ನಿರ್ಮಲ ಧರ್ಮದಿಂದ ಪಾಲಿಸು ಧರೆಯಂ – ಈ ಮಾತನ್ನು ಯಾರು ಯಾರಿಗೆ ಹೇಳಿದರು ? ಸಂದರ್ಭವನ್ನು ಬರೆಯಿರಿ.

**21 ರಿಂದ 25 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.** **(4×4=16)**

**21.** ಕೆಳಗೆ ಕೊಟ್ಟಿರುವ ಪದ್ಯದ ಭಾವಾರ್ಥವನ್ನು ಬರೆಯಿರಿ.

ದೋಣಿ ಮುಳುಗಲು ಸಣ್ಣದೊಂದು ತೂತು ಸಾಲದೆ
ಮನೆ ಸುಡಲು ಸಣ್ಣದೊಂದು ಕಿಡಿ ಸಾಲದೆ
ಮನ ಕೆಡಲು ಸಣ್ಣದೊಂದು ಮಾತು ಸಾಲದೆ
ಸರ್ವ ಚಿತ್ತಾರವ ಮಸಿ ನುಂಗಿತೆಂಬ ಗಾದೆಯೆ ಇಲ್ಲವೆ ಸದಾಶಿವಗುರು

**22.** ‘ಸಾವಿರಾರು ನದಿಗಳು’ ಕವಿತೆಯಲ್ಲಿ ಶೋಷಿತ ವರ್ಗದ ಪ್ರತಿಭಟನೆಯ ಚಿತ್ರಣ ಹೇಗೆ ಮೂಡಿ ಬಂದಿದೆ ?

**23.** ಭಾಷೆಯಲ್ಲಿ ಧ್ವನಿ ವ್ಯತ್ಯಾಸ ಎಂದರೇನು ? ಉದಾಹರಣೆ ಕೊಡಿರಿ.

**24.** ಹೊಂದಿಸಿ ಬರೆಯಿರಿ :

| ಅ | ಆ |
|---|---|
| ಮಾವ ಕೊಡಿಸಿದ ಕೋಟು | ದ. ರಾ. ಬೇಂದ್ರೆ |
| ಬದುಕು | ತಗಳಿ ಶಿವಶಂಕರ ಪಿಳ್ಳೈ |
| ಯುಗಾದಿ | ಎಂ. ಎಸ್. ಸುಂಕಾಪುರ |
| ನೆರೆ | ರವಿಶಂಕರ ಶೆಟ್ಟಿ ಒಡ್ಡಂಬೆಟ್ಟು |

**Score**

**25.** ಕೆಳಗೆ ಕೊಟ್ಟಿರುವ 'ಯುಗಾದಿ' ಕವನದ ಸಾಲುಗಳ ಆಸ್ವಾದನ ಟಿಪ್ಪಣಿಯನ್ನು ಬರೆಯಿರಿ.

ಕಮ್ಮನೆ ಬಾಣಕ್ಕೆ ಸೋತು
ಜುಮ್ಮನೆ ಮಾಮರವು ಹೂತು
ಕಾಮಗಾಗಿ ಕಾದಿದೆ
ಸುಗ್ಗಿ ಸುಗ್ಗಿ ಸುಗ್ಗಿ ಎಂದು
ಹಿಗ್ಗಿ ಗಿಳಿಯ ಸಾಲುಸಾಲು
ತೋರಣದೊಲು ಕೋದಿದೆ

**26 ರಿಂದ 29 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.** **(3×6=18)**

**26.** 'ಬೇವು ಬೆಲ್ಲದೊಳಿಡಲೇನು ಫಲ' – ಕೀರ್ತನೆಯಲ್ಲಿ ಅಡಕವಾಗಿರುವ ವಿಚಾರಗಳನ್ನು ಬರೆಯಿರಿ.

**27.** ಅಭಯರುಚಿ ಮತ್ತು ಅಭಯಮತಿ ಚಂಡಕರ್ಮನಲ್ಲಿ ಬಂಧಿಯಾಗಿರುವಾಗ ಒಬ್ಬರನ್ನೊಬ್ಬರು ಪರಸ್ಪರ ಸಂತೈಸಿಕೊಂಡ ಬಗೆಯನ್ನು ವಿವರಿಸಿರಿ.

**28.** ಮಾವ ಕೊಡಿಸಿದ ಕೋಟಿನ ಕುರಿತು ಲೇಖಕರು ಹೇಳಿರುವ ವಿಶೇಷತೆಗಳನ್ನು ಬರೆಯಿರಿ.

**29.** 'ನೆರೆ' ಕತೆಯಲ್ಲಿ ಪ್ರಕಟವಾದ ನಾಯಿಯ ಸ್ವಾಮಿನಿಷ್ಠೆಯನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

**30 ರಿಂದ 32 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.** **(2×8=16)**

**30.** 'ಪುರದ ಪುಣ್ಯಂ ಪುರುಷರೂಪಿಂದ ಪೋಗುತಿದೆ' ಕಾವ್ಯ ಭಾಗದ ಕಥಾಸಾರವನ್ನು ಬರೆಯಿರಿ.

**31.** ತನ್ನ ಕಂದನ ಬಗೆಗಿನ ತಾಯಿಯ ವಾತ್ಸಲ್ಯವು ತ್ರಿಪದಿಗಳಲ್ಲಿ ಹೇಗೆ ವ್ಯಕ್ತವಾಗಿದೆ ? ನೀವು ಓದಿದ ಜನಪದಗೀತೆ ಪಾಠಭಾಗದ ಹಿನ್ನಲೆಯಲ್ಲಿ ವಿವರಿಸಿರಿ.

**32.** ಗೋತಮಿಗೆ ಸಾಸಿವೆ ತರಲು ಏಕೆ ಸಾಧ್ಯವಾಗಲಿಲ್ಲ ? ಸಾಸಿವೆ ಕಾಳು ದೊರೆಯದೆ ತನ್ನ ಬಳಿಗೆ ಬಂದ ಗೋತಮಿಗೆ ಬುದ್ಧನು ನೀಡಿದ ಉಪದೇಶದ ಮಾತುಗಳೇನು ? ವಿಶದಪಡಿಸಿರಿ.

---